# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರು ಸತತವಾಗಿ ನಾಲ್ಕು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗಿರುವ ಬಗ್ಗೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43-ಎ ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ ಜಿಲ್ಲೆ ರವರ ಪತ್ರ ಸಂಖ್ಯೆ:ಜಿಪಂಉ:ಕೌನ್ಸಿಲ್:ಸಿಆರ್16923/2017-18, ದಿನಾಂಕ:26-06-2017ರ ಪ್ರಸ್ತಾವನೆ.
2. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:18-07-2017ರ ಕಾರಣ ಕೇಳುವ ನೋಟೀಸು.
3. ಶ್ರೀ ಗಿರೀಶ್ ಭಟ್, ಸದಸ್ಯರು, ಇವರು ಸರ್ಕಾರದ ಕಾರಣ ಕೇಳುವ ನೋಟೀಸ್‌ಗೆ ನೀಡಿದ ಲಿಖಿತ ಉತ್ತರ ದಿನಾಂಕ:28-10-2017.
4. ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ:02-01-2018.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ ಜಿಲ್ಲೆರವರ ಪ್ರಸ್ತಾವನೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿಯ ಸದಸ್ಯರು ದಿನಾಂಕ:15-11-2016, 14-12-2016, 11-01-2017 ಮತ್ತು 18-02-2017 ರಂದು ನಡೆದ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಗಳಿಗೆ, ಪಂಚಾಯತಿಯ ಅನುಮತಿ ಇಲ್ಲದೆ ನಿರಂತರವಾಗಿ ನಾಲ್ಕು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗಿದ್ದು, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ)(1)(iii)ರನ್ವಯ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರು ದಿನಾಂಕ: ದಿನಾಂಕ: 15-11-2016, 14-12-2016, 11-01-2017 ಮತ್ತು 18-02-2017ರಂದು ನಡೆದ ಪೆರ್ಡೂರು ಗ್ರಾಮ ಪಂಚಾಯಿತಿಯ ನಾಲ್ಕು ಸಾಮಾನ್ಯ ಸಭೆಗಳಿಗೆ ಪಂಚಾಯಿತಿಯ ಅನುಮತಿ ಇಲ್ಲದೆ ಗೈರು ಹಾಜರಾಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ, ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿ, ಇವರಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿರುತ್ತದೆ.

ಸದರಿ ಕಾರಣ ಕೇಳುವ ನೋಟೀಸಿಗೆ ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿರವರು ತಮ್ಮ ಲಿಖಿತ ಹೇಳಿಕೆಯನ್ನು ಮೇಲೆ ಓದಲಾದ (3)ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದು, ಅದರಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ,-

- ದಿನಾಂಕ:14-11-2016ರಂದು ನನಗೆ ಆರೋಗ್ಯ ಸಮಸ್ಯೆ ಕಂಡು ಬಂದಿದ್ದು, ನಾನು ವೈದ್ಯಕೀಯ ತಪಾಸಣೆಗೊಳಗಾಗಿದ್ದೆ. ಆ ಕಾರಣದಿಂದ ನಾನು ಸಾಮಾನ್ಯ ಸಭೆಗೆ ಹಾಜರಾಗಿರುವುದಿಲ್ಲ.

- ದಿನಾಂಕ:14-12-2016ರಂದು ಸಾಮಾನ್ಯ ಸಭೆಗೆ ಹಾಜರಾಗಿದ್ದು ಆಡಳಿತ ಪಕ್ಷದ ಒಳಗಿನ ವೈಮನಸ್ಯದಿಂದ ಸಮಯಕ್ಕೆ ಸರಿಯಾಗಿ ಸಭೆ ಆರಂಭ ಮಾಡಲು ವಿಫಲರಾಗಿದ್ದರು ಅಲ್ಲದೆ ಆ ದಿನ ಸಾಮಾನ್ಯ ಸಭೆಗೆ ನಡೆಯುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿರುವುದರಿಂದ ನಾನು ಸಮಯ ವ್ಯರ್ಥ ಮಾಡದೆ ನನ್ನ ಅಂಗಡಿಗೆ ತೆರಳಿರುತ್ತೇನೆ.
- ದಿ:11-01-2017ರ ಸಮಯದಲ್ಲಿ ಸುಮಾರು ದಿನಗಳಿಂದ ಆರೋಗ್ಯ ಹದಗೆಟ್ಟು ನನಗೆ ನಡೆಯಲು ಆಗುತ್ತಿರಲಿಲ್ಲ. ಈ ವಿಷಯವನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ಮೌಖಿಕವಾಗಿ ತಿಳಿಸಿರುತ್ತೇನೆ.
- ದಿ:18-02-2017 ರಂದು ನನ್ನ ಮನೆಯಲ್ಲಿ ಅಜ್ಜನ ತಿಥಿ ಇದ್ದುದರಿಂದ ಸಭೆಗೆ ಹಾಜರಾಗಲು ಆಗಿರುವುದಿಲ್ಲ.
- 14-11-2016 ರಿಂದ 18-2-2017ರ ಅವಧಿಯಲ್ಲಿ ಮೂರು ಬಾರಿ ಸಾಮಾನ್ಯ ಸಭೆ ನಡೆದಿರುವುದಿಲ್ಲ. ಆಡಳಿತ ಪಕ್ಷದಲ್ಲಿ ಒಮ್ಮತ ಸಹಮತ ಇಲ್ಲ ಬರಿ ಕಿತ್ತಾಟ ನಡೆಯುತ್ತಿವೆ ಎಂದು ಉಲ್ಲೇಖಿಸಿ ತಾ.ಪಂ.ಗೆ ಪತ್ರ ಬರೆದಿದ್ದು, ಸದರಿ ವಿಚಾರಗಳನ್ನು ಮರೆಮಾಚಲಾಗಿದೆ. ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿಗಳು ಒಂದು ಸಭೆ ಕರೆದಿದ್ದು, ಅದಕ್ಕೆ ನನ್ನನ್ನು ಆಹ್ವಾನಿಸಿರುವುದಿಲ್ಲ. ರಾಜಕೀಯದಿಂದಾಗಿ ನನ್ನ ಮೇಲೆ ದೂರು ಸಲ್ಲಿಸಿರುತ್ತಾರೆ. ಸದಸ್ಯತ್ವವನ್ನು ರದ್ದು ಪಡಿಸುವ ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಈ ಪ್ರಕರಣದ ಬಗ್ಗೆ ದಿನಾಂಕ:09-01-2018ರಂದು ವಿಚಾರಣೆ ನಡೆಸಲಾಯಿತು. ಸದರಿ ವಿಚಾರಣೆಗೆ ಆಪಾದಿತ ಗಿರೀಶ್ ಭಟ್‌ರವರು ಹಾಜರಿರುವುದಿಲ್ಲ. ಅವರ ಪರವಾಗಿ ವಕೀಲರು ಹಾಜರಾಗಿದ್ದು, ತಮ್ಮ ಲಿಖಿತ ಹೇಳಿಕೆಯನ್ನು ನೀಡುವುದಾಗಿ ತಿಳಿಸಿರುತ್ತಾರೆ. ಆದೇಶಕ್ಕಾಗಿ ಪ್ರಕರಣವನ್ನು ಮುಂದೂಡಲಾಯಿತು.

ದಿನಾಂಕ:01/02/2018 ಹಾಗೂ 08-02-2018ರಂದು ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿರವರು ತಮ್ಮ ಮುಂದುವರೆದ ಲಿಖಿತ ಹೇಳಿಕೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

ದಿನಾಂಕ:09-01-2018ರಂದು ವಿಚಾರಣೆಗೆ ತಮ್ಮ ವಕೀಲರು ಹಾಜರಾಗಿರುತ್ತಾರೆ. ಗ್ರಾಮ ಪಂಚಾಯಿತಿ ಹಣವನ್ನು ಗುಳುಂ ಮಾಡಿದ ಪ್ರಕರಣದ ಬಗ್ಗೆ ತಾವು ಧ್ವನಿ ಎತ್ತಿದ್ದರಿಂದ ತಮ್ಮ ಸದಸ್ಯತ್ವ ರದ್ದುಪಡಿಸಲು ಹಟ ಹಿಡಿದಿರುತ್ತಾರೆ. ಆದುದರಿಂದ ಮತ್ತೊಮ್ಮೆ ತಮಗೆ ಖುದ್ದು ಹಾಜರಾಗಿ ಹೇಳಿಕೆಯನ್ನು ನೀಡಲು ಅವಕಾಶ ನೀಡುವಂತೆ ಕೋರಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ ಜಿಲ್ಲೆ ರವರ ಪ್ರಸ್ತಾವನೆ, ಶ್ರೀ ಗಿರೀಶ್ ಭಟ್, ಸದಸ್ಯರು, ಇವರು ಸಲ್ಲಿಸಿದ ಲಿಖಿತ ಹೇಳಿಕೆ ಹಾಗೂ ಕಡತದಲ್ಲಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿ, ಇವರು ನಾಲ್ಕು ಸಾಮಾನ್ಯ ಸಭೆಗಳಿಗೆ ಸತತವಾಗಿ ಗೈರುಹಾಜರಾಗಿರುವುದು ಸಾಬೀತಾಗಿದ್ದು, ಸದರಿಯವರು ತಮ್ಮ ಗೈರುಹಾಜರಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರಿಗೆ ಯಾವುದೇ ಮನವಿ ಸಲ್ಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ರನ್ವಯ ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರ ಗ್ರಾಮ

ಪಂಚಾಯಿತಿಯ ಸದಸ್ಯ ಸ್ಥಾನವನ್ನು ರದ್ದುಗೊಳಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 585 ಗ್ರಾಪಂಅ 2017,**
**ಬೆಂಗಳೂರು, ದಿನಾಂಕ:06-04-2018.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರು ಗ್ರಾಮ ಪಂಚಾಯಿತಿಯ 4 ಸಾಮಾನ್ಯ ಸಭೆಗಳಿಗೆ ಸತತವಾಗಿ ಗೈರು ಹಾಜರಾಗಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಇವರ ಸದಸ್ಯ ಸ್ಥಾನವನ್ನು ರದ್ದುಗೊಳಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

6/4

(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1. ಜಿಲ್ಲಾಧಿಕಾರಿಗಳು, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
3. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
4. ಶ್ರೀ ಗಿರೀಶ್ ಭಟ್, ಸದಸ್ಯರು, ಪೆರ್ಡೂರು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪೆರ್ಡೂರು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
6. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.